ಶ್ರೀ ಟಿ. ಎಚ್. ಮೂಡಲಗಿರಿಗೌಡ.—8 ಲಕ್ಷ ರೂಪಾಯಿಗಳು ಎಷ್ಟು ಕೆರೆಗಳಿಗಾಗಿ ಕೊಟ್ಟಿದೆ ?

ಅಧ್ಯಕ್ಷರ .—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಹಿಂದಿನ ಪಬ್ಲಿಕ್ ವರ್ಕ್ಸ್ ಇಲಾಖೆ ಮಂತ್ರಿಗಳು ರಿಪೇರಿಯಾಗಬೇಕಾದ ಕೆರೆಗಳ ಪಟ್ಟಿ ಮಾಡಿ ಸೀರಿಯಲ್ ನಂಬರ್ ಪ್ರಕಾರ ತೆಗೆದು ಕೊಳ್ಳುತ್ತೇವೆಂದು ಹೇಳಿದ್ದರು. ಅದು ಕಾರ್ಯ ರೂಪಕ್ಕೆ ಬರುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬರುತ್ತದೆ.

Tank near Nunnur (construction)

Q.—659. Sri S. KARIAPPA (Kanakapura).—

Will the Government be pleased to state:—

(*a*) whether it is a fact that the construction of a new tank near Nunnur, Channapatna Taluk, has been included in the current year's programme and budget allotment made ;

(*b*) the steps they have taken in that direction ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) The project has been dropped due to prohibitive cost.

ಶ್ರೀ ಎಸ್. ಕರಿಯಪ್ಪ.—ನುಣ್ಣೂರು ಅಕ್ಕಪಕ್ಕದಲ್ಲಿ ಕೆರೆದು ಮೂರು ಮೈಲಿ ಹತ್ತಿರ ಯಾವ ಕೆರೆಯೂ ಇಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಎಸ್. ಕರಿಯಪ್ಪ.—ಆ ಕಾರಣದಿಂದ ಇರಿಗೇಷನ್ ವರ್ಕ್ ಆಗಿ ಪ್ರಶ್ನೆಯಲ್ಲಿ ಕೇಳಿರುವ ಕೆರೆ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಶಿಪಾರ್ಸು ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—50 ಸಾವಿರ ರೂಪಾಯಿಗಳಿಗಿಂತ ಹೆಚ್ಚಾಗಿ ಖರ್ಚಾಗುವ ಕಡೆ ನೇಕಡ ಮೂರರಷ್ಟಾದರೂ ಉತ್ಪತ್ತಿ ಬರುವುದಾಗಿದ್ದರೆ ಅದು 'ರೆಮ್ಯೂನರೇಟಿವ್' ಎಂದು ಇಂಡಿಯಾ ಸರ್ಕಾರ ಮತ್ತು ನಾವು ತೀರ್ಮಾನ ಮಾಡಿದ್ದೇವೆ ; ನೇಕಡ ಎರಡಕ್ಕಿಂತ ಕಡಿಮೆ ಬರುವುದಾದರೆ ಕಂಟ್ರಿ ಬ್ಯೂಷನ್ ಜಾಸ್ತಿ ಕೊಟ್ಟರೆ ಪರಿಶೀಲಿಸುವುದಕ್ಕೆ ಸಾಧ್ಯ.

ಶ್ರೀ ಎಸ್. ಕರಿಯಪ್ಪ.—ಜಾಸ್ತಿ ಪೆಚ್ಚವಾಗುವುದನ್ನು ಇದುವರೆಗೆ ಪ್ರೊಟೆಕ್ಟಿವ್ ವರ್ಕ್ಸ್ ಆಗಿ ತೆಗೆದು ಕೊಂಡಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆದನ್ನು ವಿಚಾರಿಸುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಹಾಗೆ ತೆಗೆದುಕೊಂಡಿರುವುದನ್ನು ವಿಚಾರಮಾಡಿ ತಮ್ಮ ಮನಸ್ಸಿಗೆ ನರಿಯೆಂದು ಕಂಡರೆ ಇದನ್ನು ಕೂಡ ಪ್ರೊಟೆಕ್ಟಿವ್ ವರ್ಕ್ ಆಗಿ ತೆಗೆದುಕೊಳ್ಳಲು ಯೋಚನೆಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಈ ಕೆರೆಯ ವಿಷಯದಲ್ಲಿ ಎಷ್ಟು ಪರ್ಸೆಂಟೇಜ್ ವರ್ಕ್ಔಟ್ ಆಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ವಿಚಾರ ಮಾಡಬೇಕು.

ಶ್ರೀ ವಿ. ವೆಂಕಟಪ್ಪ.—ಶೇಕಡ ಮೂರರಷ್ಟಕ್ಕಿಂತ ಕಡಮೆ ಯಿರುವುದನ್ನು ತೆಗೆದುಕೊಂಡಿದೆಯೇ ;

ಶ್ರೀ ಎ. ಜಿ. ರಾಮಚಂದ್ರರಾವ್.—ತೆಗೆದುಕೊಳ್ಳಬಾರದೆಂದು ನಿಯಮ ಬಂದಮೇಲೆ ತೆಗೆದು ಕೊಂಡಿಲ್ಲ.

ಶ್ರೀ ವಿ. ವೆಂಕಟಪ್ಪ.—ಆ ನಿಯಮ ಯಾವಾಗ ಬಂತು ?

ಶ್ರೀ ಕಡಿದಾಳ್ ಮಂಜಪ್ಪ.—ಡಾ॥ ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿತ್ತು. ಆ ಸಮಿತಿಯ ಶಿಪಾರ್ಸು ಸರ್ಕಾರಕ್ಕೆ ಬಂದಿದೆ. ಅದರಮೇಲೆ ಸರ್ಕಾರ ತೀರ್ಮಾನಮಾಡಿದೆ. ಮೊದಲೂ ನಿಯಮವಿತ್ತು. ಸಾಕಷ್ಟು ರಿಟರ್ನ್ ಬರಬೇಕೆಂದು ಕೇಂದ್ರ ಸರ್ಕಾರ ಮತ್ತು ಅಕೌಂಟೆಂಟ್ ಜನರಲ್ ತಿಳಿಸಿದ್ದಾರೆ.

ಶ್ರೀ ಕೆ. ಪ್ರಭಾಕರ್.—ನಿಯಮವಿದ್ದರೂ ಅದನ್ನು ಬಿಟ್ಟು ಕೆಲಸ ಮಾಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ತೊಂದರೆಗೊಳಗಾಗಿರುವ ಪ್ರದೇಶಗಳಲ್ಲಿ ಕೆಲವುಕಡೆ ರೂಲ್ಸ್ ರಿಲ್ಯಾಕ್ಸ್ ಮಾಡಿ ಮಂಜೂರುಮಾಡಿದೆ.

ಶ್ರೀ ಕೆ. ಪ್ರಭಾಕರ್.—ಡಿಸ್ಟ್ರೆಸ್ ಏರಿಯಾ ಎಂದು ನಾರ್ಮಲ್ ಆಗಿರುವ ಕಡೆ ಕೆಲಸ ಮಾಡಿಸಿರುವುದು ನಿಜವೆ ?

ಶ್ರೀ ಕಡಿದಾಳ್ ಮಂಜಪ್ಪ.—ನನ್ನ ಗಮನಕ್ಕೆ ಬಂದಿಲ್ಲ.

Sri A. G. RAMACHANDRA RAO.—Sir, 3,4 lakhs is the estimated cost. It works out at 1.27 and if they were to give a better contribution, namely, Rs. 800 per acre, then it would become remunerative. Therefore the Chief Engineer has recommended for its dropping.

ಶ್ರೀ ವಿ. ವೆಂಕಟಪ್ಪ.—ಒಂದೇ ಕಡೆ ಧಾನಲ್ ತೆಗೆಯಲು ಎಸ್ಟಿಮೇಟ್ ಮಾಡಿರುವುದು ಸರಿಯಲ್ಲ, 2 ಕಡೆ ತೆಗೆದರೆ ಹೆಚ್ಚು ಜಮೀನು ನಾಗಿಗೆ ಬರಲು ಅವಕಾಶವಾಗುತ್ತದೆ ಎಂದು ಹೇಳಿದಮೇಲೆ ಒಪ್ಪಿದ್ದರು. ಅದರಂತೆ ಮಾಡುವುದನ್ನು ಯೋಚಿಸಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿವರ ಇಲ್ಲಲ್ಲ, ವಿಚಾರಿಸುತ್ತೇನೆ.